# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | **1559 ಮತ್ತು 1546** |
| **ಸದಸ್ಯರ ಹೆಸರು** | : | ಶ್ರೀ ಎಸ್.ರುದ್ರೇಗೌಡ (ವಿಧಾನ ಸಭೆಯಿಂದ ಚುನಾಯಿತರಾದವರು) |
| **ಉತ್ತರಿಸಬೇಕಾದ ದಿನಾಂಕ** | : | 18.03.2021 |
| **ಉತ್ತರಿಸುವ ಸಚಿವರು** | | ಮುಖ್ಯಮಂತ್ರಿಗಳು |

*****

| | ಪ್ರಶ್ನೆ | ಉತ್ತರ |
|---|---|---|
| ಅ) | ಕರ್ನಾಟಕ ರಾಜ್ಯದಲ್ಲಿ ಸ್ಥಾಪಿತವಾಗಿರುವ ಜಲ ವಿದ್ಯುತ್, ಶಾಖೋತ್ಪನ್ನ ವಿದ್ಯುತ್, ಸೌರ ಶಕ್ತಿ ವಿದ್ಯುತ್ ಉತ್ಪಾದನ ಘಟಕಗಳ ಉತ್ಪಾದನೆ ಎಷ್ಟು: | ರಾಜ್ಯದಲ್ಲಿ 2020-21ನೇ ಸಾಲಿನಲ್ಲಿ ಏಪ್ರಿಲ್-2020 ರಿಂದ ಫೆಬ್ರುವರಿ-2021ರ ಅಂತ್ಯದವರೆಗೆ ವಿವಿಧ ಮೂಲಗಳಿಂದ ಲಭ್ಯವಾದ ವಿದ್ಯುತ್ತಿನ ಪ್ರಮಾಣದ ವಿವರಗಳು ಕೆಳಕಂಡಂತಿವೆ: (ಕೆಳಗಿನ ಕೋಷ್ಟಕ ನೋಡಿ) |
| ಆ) | ಕರ್ನಾಟಕ ರಾಜ್ಯದ ಒಟ್ಟು ವಿದ್ಯುಚ್ಛಕ್ತಿ ಬೇಡಿಕೆ ಎಷ್ಟು: | ರಾಜ್ಯದಲ್ಲಿ ಪ್ರಸ್ತುತ ಮಾರ್ಚ್-2021ರಲ್ಲಿ ವಿದ್ಯುತ್ ಬೇಡಿಕೆಯ ಪ್ರಮಾಣ ದಿನವಹಿ ಸರಾಸರಿ 255 ದಶಲಕ್ಷ ಯೂನಿಟ್‌ಗಳಷ್ಟಾಗಿರುತ್ತದೆ. |
| ಇ) | ಸೌರ ಶಕ್ತಿ ವಿದ್ಯುತ್ ಉತ್ಪಾದನೆಗೆ ಸರ್ಕಾರದ ನೀತಿ-ನಿಯಮಗಳೇನು? | ಸೌರ ಶಕ್ತಿ ವಿದ್ಯುತ್ ಉತ್ಪಾದನೆಗೆ ಸರ್ಕಾರದ ನೀತಿ ಮತ್ತು ನಿಯಮಗಳ ವಿವರಗಳನ್ನು **ಅನುಬಂಧದಲ್ಲಿ** ಒದಗಿಸಲಾಗಿದೆ. |

| ಕ್ರ ಸಂ | ವಿದ್ಯುತ್ತಿನ ಮೂಲ | 2020-21 (ಏಪ್ರಿಲ್-20 ರಿಂದ ಫೆಬ್ರುವರಿ-21ರ ಅಂತ್ಯದವರೆಗೆ) ಲಭ್ಯವಾದ ವಿದ್ಯುತ್ತಿನ ಪ್ರಮಾಣ (ದ.ಲ.ಯೂ.) (ತಾತ್ಕಾಲಿಕ) |
|---|---|---|
| 1 | ಜಲ ವಿದ್ಯುತ್ | 11,467.269 |
| 2 | ಶಾಖೋತ್ಪನ್ನ | 7,664.667 |
| 3 | ಅಸಂಪ್ರದಾಯಿಕಮೂಲಗಳಿಂದ (ಸೌರಶಕ್ತಿ) | 24,885.06 (11631.311) |
| 4 | ಕೇಂದ್ರ ಸರ್ಕಾರ ಸ್ವಾಮ್ಯದ ವಿದ್ಯುತ್ ಉತ್ಪಾದನಾ ಘಟಕಗಳಿಂದ ರಾಜ್ಯದ ಪಾಲು | 16,606.57 |
| 5 | ಬೃಹತ್ ಐ.ಪಿ.ಪಿ. | 1,895.0 |
| 6 | ಜಿಂದಾಲ್ | 257.49 |
| | **ಒಟ್ಟು** | **62,776.06** |

ಸಂಖ್ಯೆ: ಎನರ್ಜಿ 79 ಇಬಿಎಸ್ 2021

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ

1559 + 1546 A

ಶ್ರೀಮನ್ನು: ಉದ್ಯಾನ ತಾಲ್ಲೂಕಿನ ಶಾಸಕರಾದ ಶ್ರೀ ಕೆ. ರುದ್ರೇಗೌಡ (ವಿ.ಪ.ಸ.) ರವರ ಚುಕ್ಕೆ ಗುರುತಿಲ್ಲ:- 1559 + 1546 ಗೆ ಉತ್ತರಿಸುವ ಬಗ್ಗೆ.

**ಸೌರ ನೀತಿ 2014-21 ರಂತೆ ಸೌರ ಘಟಕ ಮತ್ತು ಸೌರ ಪಾರ್ಕಗಳ ಹಂಚಿಕೆಯ ವಿಧಾನ ಮತ್ತು ಮಾನದಂಡಗಳು/ಮಾರ್ಗಸೂಚಿಗಳು:**

ಕರ್ನಾಟಕ ಸರ್ಕಾರವು ಸೌರ ನೀತಿ 2014-21ನ್ನು ಜಾರಿಗೆ ತಂದಿದ್ದು ಸೌರ ಘಟಕಗಳಿಂದ 2020-21ನೇ ಇಸವಿಯೊಳಗಡ ಕನಿಷ್ಠ ಶೇ 8 ರಷ್ಟು ಸೌರ ನವೀಕರಿಸಬಹುದಾದ ಇಂಧನ ಖರೀದಿ ಬಾಧ್ಯತೆ (ಆರ್.ಪಿ.ಓ) ಗುರಿಯನ್ನು ತಲುಪುವ ನಿಟ್ಟಿನಲ್ಲಿ 6000ಮೆ.ವ್ಯಾ ಸಾಮರ್ಥ್ಯದ ಯೋಜನೆಗಳನ್ನು ಅನುಷ್ಠಾನಗೊಳಿಸುವ ಗುರಿಯನ್ನು ಹೊಂದಿರುತ್ತದೆ. ಸದರಿ ಸೋಲಾರ್ ಆರ್.ಪಿ.ಓ ವರ್ಗವನ್ನು ಒಳಗೊಂಡು ಸೌರ ನೀತಿಯಲ್ಲಿ ವಿವಿಧ ವರ್ಗಗಳಡಿ ಸ್ವ ಬಳಕೆ, ಮೂರನೇ ವ್ಯಕ್ತಿ ಮಾರಾಟ ಹಾಗೂ ಖಾಸಗಿ ಸೋಲಾರ್ ಪಾರ್ಕ್ ವರ್ಗಗಳಡಿ ಸೌರ ಘಟಕಗಳನ್ನು ಹಂಚಿಕೆ ಮಾಡಲು ಅವಕಾಶ ಕಲ್ಪಿಸಲಾಗಿದೆ.

ಸೌರ ನೀತಿ 2014-21 ರಲ್ಲಿ ಅವಕಾಶ ಕಲ್ಪಿಸಿದಂತೆ ಕೆಳಗಿನ ವರ್ಗಗಳಡಿ ಸೌರ ಘಟಕಗಳನ್ನು ಹಂಚಿಕೆ ಮಾಡಲಾಗುತ್ತದೆ.

- **ಸ್ಪರ್ಧಾತ್ಮಕ ಬಿಡ್ ಮುಖೇನದಡಿ:** ವಿದ್ಯುತ್ ಸರಬರಾಜು ಕಂಪನಿಗಳ ಸೌರ ವಿದ್ಯುತ್ ಖರೀದಿಗಾಗಿ ಕಾಲ ಕಾಲಕ್ಕೆ ಸರ್ಕಾರದ ಆದೇಶದ ಮೇರೆಗೆ ಕ್ರೆಡಲ್ ವತಿಯಿಂದ ಟೆಂಡರ್ ಆಹ್ವಾನಿಸಿ ಯಶಸ್ವಿ ಬಿಡ್ಡರುದಾರರಿಗೆ ಸೌರ ಘಟಕಗಳನ್ನು ಹಂಚಿಕೆ ಮಾಡಲಾಗುತ್ತಿತ್ತು. ಹಂಚಿಕೆ ಪಡೆದ ಅಭಿವೃದ್ಧಿದಾರರು ಸಂಬಂಧಿಸಿದ ವಿದ್ಯುತ್ ಸರಬರಾಜು ಕಂಪನಿಗಳೊಂದಿಗೆ ವಿದ್ಯುತ್ ಖರೀದಿ ಒಪ್ಪಂದ(PPA)ಗಳನ್ನು ಮಾಡಿಕೊಂಡು, ತದ ನಂತರ ಕೆ.ಇ.ಆರ್.ಸಿ ಯಿಂದ ಸದರಿ PPA ಗಳಿಗೆ ಅನುಮೋದನೆಗಳನ್ನು ಪಡೆಯುತ್ತಿದ್ದರು. ಟೆಂಡರ್ ನಲ್ಲಿ ನಿಗಧಿಪಡಿಸಿದ ಅವಧಿಯಂತೆ ಯೋಜನೆಯನ್ನು ಅನುಷ್ಠಾನಗೊಳಿಸಿದ ಪಕ್ಷದಲ್ಲಿ ಟೆಂಡರ್ ನಲ್ಲಿ ಕಂಡುಕೊಂಡ ದರದಂತೆಯೇ ವಿದ್ಯುತ್ ಸರಬರಾಜು ಕಂಪನಿಗಳಿಂದ ಅಭಿವೃದ್ಧಿದಾರರಿಗೆ ಉತ್ಪಾದಿಸಿದ ವಿದ್ಯುತ್ ಗೆ ಮೊತ್ತವನ್ನು ಪಾವತಿಸಲಾಗುವುದು. ಸೋಲಾರ್ Renewable Energy Purchase Obligation (RPO) ಗುರಿಯನ್ನು ಈಗಾಗಲೇ ಸಾಧಿಸಿರುವುದರಿಂದ ಮಾನ್ಯ ಕೆ.ಇ.ಆರ್.ಸಿ ಆದೇಶದಂತೆ ಸಧ್ಯಕ್ಕೆ ಯಾವುದೇ ಟೆಂಡರ್ ನ್ನು ಆಹ್ವಾನ ಮಾಡಲಾಗುತ್ತಿಲ್ಲ.

- **ಸ್ವಯಂ/ಸಮೂಹ ಬಳಕೆ (Captive/Group Captive) ಮತ್ತು ಮೂರನೇ ವ್ಯಕ್ತಿಯ ಮಾರಾಟ (TPP-TPS):** ಸದರಿ ವರ್ಗದಡಿ ಇಚ್ಛೆಯುಳ್ಳ ಅಭಿವೃದ್ಧಿದಾರರು ಕೆ.ಆರ್.ಇ.ಡಿ.ಎಲ್ ನ ವೆಬ್ ಸ್ಟೈಟ್ ನಲ್ಲಿ ತಿಳಿಸಿರುವಂತೆ ನಿಗಧಿತ ನಮೂನೆಯಲ್ಲಿ ಪೂರ್ಣ ಮಾಹಿತಿಯೊಂದಿಗೆ ಅರ್ಜಿ ಸಲ್ಲಿಸಬೇಕು.
  1. ಅರ್ಜಿ ಶುಲ್ಕ: ವ್ಯವಸ್ಥಾಪಕ ನಿರ್ದೇಶಕರು, ಕೆ.ಆರ್.ಇ.ಡಿ.ಎಲ್ ಇವರ ಹೆಸರಲ್ಲಿ ರೂ. 11,800/-ಗಳ ಮೊತ್ತದ ಹಾಗೂ ಅನ್ವಯಿಸುವ ಸಂಸ್ಕರಣಾ ಶುಲ್ಕ (ಪ್ರತಿ ಮೆ.ವ್ಯಾಗೆ ರೂ. 25,000+18% ಜಿ.ಎಸ್.ಟಿ) ಮೊತ್ತದ ಡಿ.ಡಿ.
  2. ಕಂಪನಿಯ AOA ಮತ್ತು MOA ಗಳು
  3. Net-Worth: ಕಂಪನಿಯವರ ವಾರ್ಷಿಕ ನೆಟ್ ವರ್ತ್ ಕವಿನಿ ಆಯೋಗ ನಿಗಧಿಪಡಿಸಿರುವ ಬಂಡವಾಳ ವೆಚ್ಚದ ಶೇ 30 ರಷ್ಟು (ಅಂದರೆ ಸದ್ಯ ರೂ. 1.05 ಕೋಟಿ) ಹೊಂದಿರಬೇಕು ಇದಕ್ಕೆ ಸಂಬಂಧಿಸಿದಂತೆ ಕಂಪನಿಯ Balance Sheet ಮತ್ತು ವೆಬ್ ಸ್ಟೈಟ್ ನಲ್ಲಿ ತಿಳಿಸಿರುವಂತೆ ನಿಗಧಿತ ನಮೂನೆಯಲ್ಲಿ Chartered Accountant ರಿಂದ ದೃಢೀಕೃತ ಪ್ರಮಾಣ ಪತ್ರವನ್ನು ಸಲ್ಲಿಸಬೇಕು.

4. ಸಂಭವನಿಯ ಯೋಜನಾ ವರದಿ/ ವಿವರವಾದ ಯೋಜನಾ ವರದಿ ಪಿ.ಎಫ್.ಆರ್/ಡಿ.ಪಿ.ಆರ್

5. ಖಾಸಗಿ ಜಮೀನಿನ ವಿವರಗಳು.

6. **ಆರ್.ಆರ್. ನಂಬರ್ ಮತ್ತು ಅದಕ್ಕೆ ಸಂಬಂಧಿಸಿದ ದಾಖಲಾತಿ (ಸ್ವಯಂಬಳಕೆ ವರ್ಗಕ್ಕೆ ಮಾತ್ರ ಅನ್ವಯಿಸುತ್ತದೆ).**

7. ಸಮೂಹ ಬಳಕೆ ವರ್ಗದಡಿ, ಉತ್ಪದನಾ ಕಂಪನಿಯಲ್ಲಿ ಕನಿಷ್ಠ ಶೇ.26 ರಷ್ಟು ಪಾಲುದಾರಿಕೆಯನ್ನು ಹೊಂದಿರಬೇಕು. ಹಾಗೂ ಉತ್ಪಾದನೆಯಾದ ವಿದ್ಯುತ್ತಿನಲ್ಲಿ ಕನಿಷ್ಠ ಶೇ.51 ರಷ್ಟು ವಿದ್ಯುತ್ತನ್ನು ಬಳಕೆ ಮಾಡಿಕೊಳ್ಳಬೇಕು (ಸಮೂಹ ಬಳಕೆ ವರ್ಗಕ್ಕೆ ಮಾತ್ರ ಅನ್ವಯಿಸುತ್ತದೆ)

- **ಖಾಸಗಿ ಸೌರ ಪಾರ್ಕ್:** ಸದರಿ ವರ್ಗದಡಿ ಇಚ್ಛೆಯುಳ್ಳ ಅಭಿವೃದ್ಧಿದಾರರು ಕೆ.ಆರ್.ಇ.ಡಿ.ಎಲ್ ನ ವೆಬ್ ಸೈಟ್ ನಲ್ಲಿ ತಿಳಿಸಿರುವಂತೆ ನಿಗಧಿತ ನಮೂನೆಯಲ್ಲಿ ಪೂರ್ಣ ಮಾಹಿತಿಯೊಂದಿಗೆ ಅರ್ಜಿ ಸಲ್ಲಿಸಬೇಕು.

1. ಅರ್ಜಿ ಶುಲ್ಕ: ವ್ಯವಸ್ಥಾಪಕ ನಿರ್ದೇಶಕರು, ಕೆ.ಆರ್.ಇ.ಡಿ.ಎಲ್ ಇವರ ಹೆಸರಲ್ಲಿ ರೂ. 1,18,000/-ಗಳ (ಜಿ.ಎಸ್.ಟಿ ಒಳಗೊಂಡು) ಮೊತ್ತದ ಹಾಗೂ ಅನ್ವಯಿಸುವ ಸಂಸ್ಕರಣಾ ಶುಲ್ಕ (ಪ್ರತಿ ಮೆ.ವ್ಯಾಗೆ ರೂ. 25,000+18% ಜಿ.ಎಸ್.ಟಿ) ಮೊತ್ತದ ಡಿ.ಡಿ.

2. ಕಂಪನಿಯ AOA ಮತ್ತು MOA ಗಳು

3. Net-Worth : ಕಂಪನಿಯವರ ವಾರ್ಷಿಕ ನೆಟ್ ವರ್ತ್ ಡಿ.ಪಿ.ಆರ್ ನಲ್ಲಿ ತಿಳಿಸಿದ ಯೋಜನಾ ವೆಚ್ಚದ ಶೇ 30 ರಷ್ಟು ಹೊಂದಿರಬೇಕು ಇದಕ್ಕೆ ಸಂಬಂಧಿಸಿದಂತೆ ಕಂಪನಿಯ Balance Sheet ಮತ್ತು ವೆಬ್ ಸೈಟ್ ನಲ್ಲಿ ತಿಳಿಸಿರುವಂತೆ ನಿಗಧಿತ ನಮೂನೆಯಲ್ಲಿ Chartered Accountant ರಿಂದ ದೃಢೀಕೃತ ಪ್ರಮಾಣ ಪತ್ರವನ್ನು ಸಲ್ಲಿಸಬೇಕು.

4. ಪಿ.ಎಫ್.ಆರ್. (Pre Feasibility Report)/ಡಿ.ಪಿ.ಆರ್(Detailed Project Report)

5. ಭೂಮಿಯ ದಾಖಲೆಗಳು.

<u>ಸೂಚನೆ:</u>

1. ಸೌರ ನೀತಿಯನ್ವಯ ಪ್ರತಿ ತಾಲ್ಲೂಕಿನ ಒಟ್ಟಾರೆ ವಿವಿಧ ವರ್ಗಗಳಡಿ (ಅಂದರೆ ಸ್ಪರ್ಧಾತ್ಮಕ ಬಿಡ್ ಮುಖೇನದಡಿ, ಮೂರನೆ ವ್ಯಕ್ತಿ ಮಾರಾಟ ವರ್ಗ/ಸ್ವಂತ ಬಳಕೆ ವರ್ಗ ಹಾಗೂ ಸೌರ ಪಾರ್ಕ್) ಸೌರ ಯೋಜನೆಗಳ ಹಂಚಿಕೆ ಸಾಮರ್ಥ್ಯವನ್ನು **200** ಮೆ.ವ್ಯಾಗೆ ಸೀಮಿತಗೊಳಿಸಲಾಗಿದೆ. ಸದರಿ ತಾಲ್ಲೂಕುವಾರು ಹಂಚಿಕೆ ಪಟ್ಟಿ ವೆಬ್ ಸೈಟ್ ನಲ್ಲಿ ಲಭ್ಯವಿರುತ್ತದೆ. ಅಭಿವೃದ್ಧಿದಾರರು 200 ಮೆ.ವ್ಯಾ ಮೀರದ ತಾಲ್ಲೂಕುಗಳಲ್ಲಿ ಮೂರನೇ ವ್ಯಕ್ತಿ/ಸ್ವಂತ ಬಳಕೆ ಹಾಗೂ ಸೌರ ಪಾರ್ಕ್ ಸೌರ ಯೋಜನೆಗಳ ಹಂಚಿಕೆಗಾಗಿ ಅರ್ಜಿಯನ್ನು ಸಲ್ಲಿಸಬಹುದಾಗಿದೆ.

2. ಹಂಚಿಕೆ ಪಡೆದ ಅಭಿವೃದ್ಧಿದಾರರು 45 ದಿನಗಳೊಳಗೆ ಪ್ರತಿ ಮೆ.ವ್ಯಾಗೆ **ರೂ. 5.00 ಲಕ್ಷಗಳಂತೆ (ಮೂರನೇ ವ್ಯಕ್ತಿ ಮಾರಾಟ (TPP-TPS), ಸ್ವಯಂ ಬಳಕೆ (Captive) ಹಾಗೂ ಖಾಸಗಿ ಸೌರ ಪಾರ್ಕ್)** ಬ್ಯಾಂಕ್ ಗ್ಯಾರಂಟಿಯನ್ನು ಸಲ್ಲಿಸಬೇಕು. ಯೋಜನೆಗಳು ಅನುಷ್ಠಾನಗೊಂಡನತರ ಬ್ಯಾಂಕ್ ಗ್ಯಾರಂಟಿಯನ್ನು ಅಭಿವೃದ್ಧಿದಾರರಿಗೆ ಹಿಂದಿರುಗಿಸಲಾಗುವುದು.

3. ಹಂಚಿಕೆ ಪಡೆದ ಘಟಕವನ್ನು ಆದೇಶದ ದಿನಾಂಕದಿಂದ **18 ತಿಂಗಳುಗಳಲ್ಲಿ** ಅನುಷ್ಠಾನಗೊಳಿಸಬೇಕಾಗಿರುತ್ತದೆ.

4. ಖಾಸಗಿ ಸೌರ ಪಾರ್ಕ್ ಹಂಚಿಕೆ ಪಡೆದ ಅಭಿವೃದ್ಧಿದಾರರು ಹಂಚಿಕೆ ಆದೇಶದ ದಿನಾಂಕದಿಂದ **30 ತಿಂಗಳೊಳಗೆ** ಸಂಪೂರ್ಣ ಪಾರ್ಕ್ ನ್ನು ಮತ್ತು ಸೌರ ಘಟಕಗಳನ್ನು ಅನುಷ್ಠಾನಗೊಳಿಸಬೇಕಾಗಿರುತ್ತದೆ. ಹಂಚಿಕೆ ಪಡೆದ ನಂತರ ಕೆ.ಪಿ.ಟಿ.ಸಿ.ಎಲ್ ನೊಂದಿಗೆ (Karnataka Power Transmission Corporation Limited) ಕೆ.ಇ.ಆರ್.ಸಿ ಮಾರ್ಗದರ್ಶನದನ್ವಯ Wheeling ಕರಾರನ್ನು ಮಾಡಿಕೊಳ್ಳಬೇಕು.

5. ಅಭಿವೃದ್ಧಿದಾರರು ಸೋಲಾರ್ ಘಟಕಗಳ ಅನುಷ್ಠಾನಕ್ಕಾಗಿ ಅವಶ್ಯವಿರುವ ಜಮೀನಿನ ಪರಿಭಾವಿತ ಭೂ ಪರಿವರ್ತನೆ ಅನುಮತಿಯನ್ನು ಪಡೆದುಕೊಳ್ಳಬೇಕು.

6. Ground Mounted Project ಗಳಿಗೆ ಸರ್ಕಾರದಿಂದ ಯಾವುದೇ ಸಹಾಯಧನ ಲಭ್ಯವಿರುವುದಿಲ್ಲ.

7. ಅರ್ಜಿ ಮಾಧರಿಯು ಕೆ.ಆರ್.ಇ.ಡಿ.ಎಲ್ ವೆಬ್ ಸೈಟ್ ನಲ್ಲಿ ಲಭ್ಯವಿರುತ್ತದೆ.
http://www.kredlinfo.in/solargrid/Application%20Form%20for%20Karnataka%20of%20Solar%20Power%20Projects.pdf